ಕರ್ನಾಟಕ ಸರ್ಕಾರ
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

080 – 29753051
directorfbish@gmail.com
www.esuraksha.karnataka.gov.in

ನಿರ್ದೇಶನಾಲಯ,
ಕಲ್ಯಾಣ-ಸುರಕ್ಷಾ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029

No. DFB/Misc/CR-07/2021-22 Date : 08-06-2021

## ಸುತ್ತೋಲೆ

**ವಿಷಯ:** ಕೋವಿಡ್ 2ನೇ ಅಲೆಯ ಸಂದರ್ಭದಲ್ಲಿ ಕಾರ್ಖಾನೆಗಳ ಕಾರ್ಯಾಚರಣೆ ಕುರಿತು ಸರ್ಕಾರವು ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ನು ಪರಿಪಾಲಿಸುತ್ತಿರುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂ: RD 158 TNR 2020, ದಿ: 26-04-2021, 07-05-2021, 02-06-2021 ಮತ್ತು 03-06-2021
2) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆರವರ ಸುತ್ತೋಲೆ ಸಂ: CI 06 SPI 2020, ದಿ: 08-05-2021, 09-05-2021 ಮತ್ತು 05-06-2021

----------------------

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶಗಳಲ್ಲಿ ಕೋವಿಡ್ 2ನೇ ಅಲೆಯ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ನಿಯಂತ್ರಿಸುವ ಸಂಬಂಧ ಜನತಾ ಕರ್ಫ್ಯೂ / ಲಾಕ್ ಡೌನ್ ಅನ್ನು ಘೋಷಿಸಿರುತ್ತದೆ. ಸದರಿ ಜನತಾ ಕರ್ಫ್ಯೂ / ಲಾಕ್ ಡೌನ್ ಸಮಯದಲ್ಲಿ ಕಾರ್ಖಾನೆಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಮತ್ತು ಉಲ್ಲೇಖ (2) ಸುತ್ತೋಲೆಗಳನ್ವಯ ಕೆಲವೊಂದು ನಿರ್ದಿಷ್ಟ ಕಾರ್ಖಾನೆಗಳನ್ನು ಕೆಲವು ಷರತ್ತುಗಳೊಂದಿಗೆ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಲಾಗಿದೆ.

ಅದರಂತೆ ಅತ್ಯವಶ್ಯಕ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿರುವ ಕಾರ್ಖಾನೆಗಳಿಗೆ ಹಾಗೂ ನಿರಂತರ ಉತ್ಪಾದನೆಯಲ್ಲಿ ತೊಡಗಿರುವ ಕಾರ್ಖಾನೆಗಳಿಗೆ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ. 100% EOU ಕಾರ್ಖಾನೆಗಳಲ್ಲಿ ಶೇ. 50% ರಷ್ಟು ಕಾರ್ಮಿಕರನ್ನು ಮತ್ತು ಇತರೆ ವಸ್ತುಗಳನ್ನು ರಫ್ತು ಮಾಡಲು ತಯಾರಿಸುವ ಕಾರ್ಖಾನೆಗಳಲ್ಲಿ ಶೇ. 30% ರಷ್ಟು ಕಾರ್ಮಿಕರನ್ನು ನೇಮಿಸಿಕೊಂಡು ಉತ್ಪಾದನಾ ಕಾರ್ಯವನ್ನು ನಡೆಸಲು ಅನುವು ಮಾಡಿಕೊಡಲಾಗಿದೆ. ಈ ಕಾರ್ಖಾನೆಗಳನ್ನು ಹೊರತುಪಡಿಸಿ ಇತರೆ ಕಾರ್ಖಾನೆಗಳು ಲಾಕ್ ಡೌನ್ ಅವಧಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶವಿರುವುದಿಲ್ಲ. ಸರ್ಕಾರದ ಆದೇಶ/ಸುತ್ತೋಲೆಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳ ಬಗ್ಗೆ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.

ಇದಲ್ಲದೇ 1000 ಕ್ಕಿಂತ ಅಧಿಕ ಕಾರ್ಮಿಕರನ್ನು ನೇಮಿಸಿಕೊಂಡಿರುವ ಕಾರ್ಖಾನೆಗಳಲ್ಲಿ ಪ್ರತಿ ವಾರಕ್ಕೆ ಎರಡು ಬಾರಿ Random ಆಗಿ ಶೇ. 10% ಕಾರ್ಮಿಕರನ್ನು ಕಡ್ಡಾಯವಾಗಿ ಕೋವಿಡ್ -19 ಟೆಸ್ಟ್ ಗೆ ಒಳಪಡಿಸುವ ಷರತ್ತನ್ನು ವಿಧಿಸಲಾಗಿರುತ್ತದೆ ಹಾಗೂ ಕೋವಿಡ್-19ರ ಹರಡುವಿಕೆಯನ್ನು ತಡೆಯುವ ಸಲುವಾಗಿ ಇರುವ Standard Operating Procedures ಗಳನ್ನು ತಪ್ಪದೇ ಪಾಲಿಸಲು ಸೂಚಿನೆಯನ್ನು ನೀಡಲಾಗಿರುತ್ತದೆ.

ಮೇಲಿನ ಷರತ್ತುಗಳನ್ನು ಪಾಲಿಸಿ ಉತ್ಪಾದನಾ ಕಾರ್ಯವನ್ನು ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ಅವಶ್ಯಕತೆ ಇರುವುದರಿಂದ ಹಾಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ದೈನಂದಿನ ವರದಿಯನ್ನು ಚೆಕ್ ಲಿಸ್ಟ್ ಮೂಲಕ ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳಿಗೆ ಸಲ್ಲಿಸಲು ತಿಳಿಸಿದೆ.

ಸದರಿ ವಿಷಯದ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಕ್ರಮ ವಹಿಸಲು ಸೂಚಿಸಲಾಗಿದೆ. ಸರ್ಕಾರದ ಆದೇಶ / ಸುತ್ತೋಲೆಗಳು ಹಾಗೂ ಪರಿಶೀಲನೆ ಸಮಯದಲ್ಲಿ ಪರಿಗಣಿಸಬೇಕಾದ ಚೆಕ್ ಲಿಸ್ಟ್ ಅನ್ನು ಇ-ಮೇಲ್ ಮುಖಾಂತರ ಲಗತ್ತಿಸಿ ಕಳುಹಿಸಲಾಗಿದೆ.

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

**ಪ್ರತಿಗಳು:**

1. ಕಾರ್ಖಾನೆಗಳು ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು
2. ಕಾರ್ಖಾನೆಗಳ ಜಂಟಿ ನಿರ್ದೇಶಕರು–1/2/3, ಬೆಂಗಳೂರು/ ಬಳ್ಳಾರಿ
3. ಬಾಯ್ಲರುಗಳ ಜಂಟಿ ನಿರ್ದೇಶಕರು, ಬೆಂಗಳೂರು
4. ಕಾರ್ಖಾನೆಗಳ ಜಂಟಿ ನಿರ್ದೇಶಕರು(ವೈದ್ಯಕೀಯ), ಬೆಂಗಳೂರು
5. ಔದ್ಯೋಗಿಕ ಆರೋಗ್ಯ ತಜ್ಞರು, ಬೆಂಗಳೂರು
6. ಕಾರ್ಖಾನೆಗಳ ಉಪ ನಿರ್ದೇಶಕರು, ಬೆಂಗಳೂರು ವಿಭಾಗ–1/2/3/4/5/ಮಂಗಳೂರು ವಿಭಾಗ–1/ ಮೈಸೂರು ವಿಭಾಗ–1/ ತುಮಕೂರು ವಿಭಾಗ–1/ಬೆಳಗಾಂ ವಿಭಾಗ–1
7. ಬಾಯ್ಲರುಗಳ ಉಪ ನಿರ್ದೇಶಕರು, ಬೆಳಗಾಂ/ದಾವಣಗೆರೆ ವಿಭಾಗ
8. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ–6/7/8/9/10/ಕಲ್ಬುರ್ಗಿ ವಿಭಾಗ/ ಬಳ್ಳಾರಿ ವಿಭಾಗ/ ಹುಬ್ಬಳ್ಳಿ ವಿಭಾಗ–1
9. ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು, ಹುಬ್ಬಳ್ಳಿ / ಕಲ್ಬುರ್ಗಿ ವಿಭಾಗ
10. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ–11/12/13/14/15/16/17/18/19/20/ ಮೈಸೂರು ವಿಭಾಗ–2/ಹಾಸನ ವಿಭಾಗ/ದಾವಣಗೆರೆ ವಿಭಾಗ/ಮಂಗಳೂರು ವಿಭಾಗ–2/ಶಿವಮೊಗ್ಗ ವಿಭಾಗ/ ರಾಯಚೂರು ವಿಭಾಗ/ಬೆಳಗಾಂ ವಿಭಾಗ–2/ ಹುಬ್ಬಳ್ಳಿ ವಿಭಾಗ–2/ ಉಡುಪಿ ವಿಭಾಗ/ ಕೊಪ್ಪಳ ವಿಭಾಗ

# Checklist

Name and Address of the Factory:

| | | | |
|---|---|---|---|
| 1. | Type of Industries (%age of workers allowed to work) | 1. Essential Commodities (100%) | |
| | | 2. Continuous process (100%) | |
| | | 3. 100% EOU (50%) | |
| | | 4. Other Export Oriented Industries (30%) | |
| 2. | No. of workers employed on the day of visit | As per Serial No. 1 | |
| 3. | SOP | 1. Mask/ Sanitizer | |
| | | 2. Thermal Scanning | |
| | | 3. Sanitization of workplace | |
| | | 4. Social Distance | |
| 4. | Vaccination details | No. of workers already vaccinated | |
| | | No. of workers yet to be vaccinated | |
| 5. | Random Testing (factory employing more than 1000 workers | 10% testing twice in a week | |
| 6. | Other additional precautions / initiatives /information | | |
| 7. | | | |
| 8. | | | |

**ಆಯುಕ್ತರು**
ಕಾರ್ಮಿಕ ಇಲಾಖೆ

ಕರ್ನಾಟಕ ಸರ್ಕಾರ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 029
ಕಛೇರಿ: 080 2975 3078
ಇಮೇಲ್ : labour.commissioner42@gmail.com

ಸಂಖ್ಯೆ:ಇಎಸ್‌ಟಿ/ಇತರೆ/ಕೋವಿಡ್-19/2021-22 ದಿನಾಂಕ:08.06.2021

# :: <u>ಸುತ್ತೋಲೆ</u> ::

**ವಿಷಯ :-** ಕೋವಿಡ್-19 2ನೇ ಅಲೆಯ ಸಂದರ್ಭದಲ್ಲಿ ಕಾರ್ಖಾನೆಗಳ ಕಾರ್ಯಾಚರಣೆ ಕುರಿತು ಸರ್ಕಾರವು ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ನು ಪರಿಪಾಲಿಸುತ್ತಿರುವುದನ್ನು ಪರಿಶೀಲಿಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂ: RD 158 DNR 2020 ದಿನಾಂಕ: 03.06.2021.
2. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆರವರ ಸುತ್ತೋಲೆ ಸಂ: CI 06 SPI 2020, ದಿನಾಂಕ: 08.05.2021, 09.05.2021 ಮತ್ತು 05.06.2021.

== == ==

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-[1]ರ ಸರ್ಕಾರದ ಆದೇಶಗಳಲ್ಲಿ ಕೋವಿಡ್ 2ನೇ ಅಲೆಯ ಹಿನ್ನೆಲೆಯಲ್ಲಿ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ನಿಯಂತ್ರಿಸುವ ಸಂಬಂಧ ಹಂತ ಹಂತವಾಗಿ ಜನತಾ ಕರ್ಫ್ಯೂ/ಲಾಕ್‌ಡೌನ್ ಅನ್ನು ಘೋಷಣೆ ಮಾಡಿದ ಸಮಯದಲ್ಲಿ ಕಾರ್ಖಾನೆಗಳ ಕಾರ್ಯಾಚರಣೆಗೆ ನಿರ್ಭಂದಗಳನ್ನು ಹೇರಿತ್ತು. ನಂತರ ಸೋಂಕಿನ ಪ್ರಮಾಣ ಕಡಿಮೆಯಾಗುತ್ತಾ ಬಂದಂತೆ, ಸರ್ಕಾರದ ಆದೇಶ ಮತ್ತು ಉಲ್ಲೇಖ-[2]ರ ಸುತ್ತೋಲೆಗಳನ್ವಯ ಕೆಲವು ಷರತ್ತುಗಳನ್ನು ವಿಧಿಸಿ ಕೆಲವೊಂದು ಅವಶ್ಯಕವಾದ ನಿರ್ಧಿಷ್ಟ ಕಾರ್ಖಾನೆಗಳನ್ನು ಕಾರ್ಯನಿರ್ವಹಿಸಲು ಅವಕಾಶ ಮಾಡಿರುತ್ತದೆ.

ಅದರಂತೆ ಅತ್ಯವಶ್ಯಕ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿರುವ ಕಾರ್ಖಾನೆಗಳಿಗೆ ಹಾಗೂ ನಿರಂತರ ಉತ್ಪಾದನೆಯಲ್ಲಿ ತೊಡಗಿರುವ ಕಾರ್ಖಾನೆಗಳಿಗೆ ಕಾರ್ಯನಿರ್ವಹಿಸಲು ಷರತ್ತುಬದ್ಧ ಅನುಮತಿ ನೀಡಲಾಗಿದೆ. ಶೇ. 100 ರಷ್ಟು ರಫ್ತು ಆಧಾರಿತ ಸಂಸ್ಥೆಗಳು/ಕಾರ್ಖಾನೆಗಳು ಶೇ. 50 ರಷ್ಟು ಕಾರ್ಮಿಕರನ್ನು ಮತ್ತು ಇತರೆ ವಸ್ತುಗಳ ರಫ್ತು ಆಧಾರಿತ ಸಂಸ್ಥೆಗಳು/ಕಾರ್ಖಾನೆಗಳಲ್ಲಿ ಶೇ. 30% ರಷ್ಟು ಕಾರ್ಮಿಕರನ್ನು ಮಾತ್ರ ನೇಮಿಸಿಕೊಂಡು ಉತ್ಪಾದನಾ ಕಾರ್ಯವನ್ನು ನಡೆಸಲು ಅನುಮತಿ ನೀಡಲಾಗಿದೆ. **ಉಲ್ಲೇಖದ ಸರ್ಕಾರದ ಸುತ್ತೋಲೆಗಳಲ್ಲಿ ನಿರ್ಧಿಷ್ಟವಾಗಿ ತಿಳಿಸಿರುವ ಕಾರ್ಖಾನೆಗಳನ್ನು ಹೊರತುಪಡಿಸಿ ಇತರೆ ಕಾರ್ಖಾನೆಗಳು ಲಾಕ್‌ಡೌನ್ ಅವಧಿಯಲ್ಲಿ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಲು ಅವಕಾಶ** ಇರುವುದಿಲ್ಲ. ಸರ್ಕಾರದ ಆದೇಶ/ಸುತ್ತೋಲೆಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳ ಬಗ್ಗೆ ಸರ್ಕಾರದ ಆದೇಶಗಳು/ಸುತ್ತೋಲೆಗಳನ್ವಯ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.

ಇದಲ್ಲದೆ, **ಸಾವಿರಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಂಡಿರುವ ಕಾರ್ಖಾನೆಗಳಲ್ಲಿ ಪ್ರತೀ ವಾರಕ್ಕೆ ಎರಡು ಬಾರಿ ರ್‍ಯಾಂಡಮ್ ಆಗಿ ಶೇ. 10 ರಷ್ಟು ಕಾರ್ಮಿಕರನ್ನು ಕಡ್ಡಾಯವಾಗಿ ಕೋವಿಡ್-19 ಟೆಸ್ಟ್‌ಗೆ ಒಳಪಡಿಸುವ ಷರತ್ತನ್ನು ವಿಧಿಸಲಾಗಿರುತ್ತದೆ** ಹಾಗೂ ಕೋವಿಡ್-19 ಹರಡುವಿಕೆಯನ್ನು ತಡೆಯುವ ಸಲುವಾಗಿ ಇರುವ ನಿಯಮಗಳನ್ನು (Standard Operating Procedures) ತಪ್ಪದೇ ಪಾಲಿಸಲು ಸೂಚನೆಯನ್ನು

ನೀಡಲಾಗಿರುತ್ತದೆ. ಎಲ್ಲಾ ಉದ್ಯೋಗದಾತರು ಸರ್ಕಾರವು ಹೊರಡಿಸಿರುವ ಕೋವಿಡ್–19 ಎಲ್ಲಾ ಮಾರ್ಗಸೂಚಿಗಳನ್ನು ಪರಿಪಾಲಿಸುತ್ತಿರುವುದನ್ನು ದೃಢಪಡಿಸಿಕೊಳ್ಳುವುದು.

ಸರ್ಕಾರದ ಸುತ್ತೋಲೆ/ಆದೇಶಗಳನ್ವಯ ಮೇಲಿನ ಷರತ್ತುಗಳನ್ನು ಪಾಲಿಸಿ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಉತ್ಪಾದನಾ ಕಾರ್ಯವನ್ನು ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ಅವಶ್ಯಕತೆ ಇರುವುದರಿಂದ ಹಾಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಖಾನೆಗಳಿಗೆ ಭೇಟಿ ನೀಡಿ (ಪಟ್ಟಿ ಲಗತ್ತಿಸಿದೆ) ಪರಿಶೀಲಿಸಿ, ದೈನಂದಿನ ವರದಿಯನ್ನು ಚೆಕ್‌ಲಿಸ್ಟ್ ಮೂಲಕ (ಪ್ರತಿ ಲಗತ್ತಿಸಿದೆ) ಸಂಬಂಧಪಟ್ಟ ಉಪ ಕಾರ್ಮಿಕ ಆಯುಕ್ತರುಗಳಿಗೆ ಸಲ್ಲಿಸಲು ತಿಳಿಸಿದೆ.

ಉಪ ಕಾರ್ಮಿಕ ಆಯುಕ್ತರುಗಳು ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳು/ಕಾರ್ಮಿಕ ಅಧಿಕಾರಿಗಳು/ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರುಗಳಿಂದ ಸ್ವೀಕರಿಸಿದ ಮಾಹಿತಿಯನ್ನು **ಪ್ರತೀ ದಿನ ತಹಲೀಕರಿಸಿ ಕೇಂದ್ರ ಕಛೇರಿಗೆ** ಸಲ್ಲಿಸುವಂತೆ ಈ ಮೂಲಕ ಸೂಚಿಸಿದೆ, ಹಾಗೂ ಉಲ್ಲೇಖಗಳಲ್ಲಿ ತಿಳಿಸಿರುವ ಸರ್ಕಾರದ ಸುತ್ತೋಲೆಗಳನ್ವಯ ನಿಯಮಾನುಸಾರವಾಗಿ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿದೆ. ಈ ಪರಿಶೀಲನೆಯನ್ನು ಸಾಮಾನ್ಯವಾಗಿ ಕೈಗೊಳ್ಳುವ ಕಾರ್ಮಿಕ ಕಾಯ್ದೆಗಳ ತಪಾಸಣೆ ಎಂದು ಭಾವಿಸದೆ ನಿರ್ದಿಷ್ಟವಾಗಿ ಇದೇ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಿಕೊಳ್ಳುವುದು.

ವಿಷಯದ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಕ್ರಮವಹಿಸಲು ಈ ಮೂಲಕ ಸೂಚಿಸಿದೆ. ಸರ್ಕಾರದ ಆದೇಶ/ಸುತ್ತೋಲೆಗಳು ಹಾಗೂ ಪರಿಶೀಲನಾ ಸಮಯದಲ್ಲಿ ಪರಿಗಣಿಸಬೇಕಾದ ಚೆಕ್‌ಲಿಸ್ಟ್ ಅನ್ನು ಈ–ಮೇಲ್ ಮೂಲಕ ಕಳುಹಿಸಲಾಗುವುದು.

ಆಯುಕ್ತರು
ಕಾರ್ಮಿಕ ಇಲಾಖೆ

**ಇವರಿಗೆ:**

ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳು,
ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳು
ಎಲ್ಲಾ ಕಾರ್ಮಿಕ ಅಧಿಕಾರಿಗಳು
ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರುಗಳು
ಎಲ್ಲಾ ಕಾರ್ಮಿಕ ನಿರೀಕ್ಷಕರುಗಳು

**ಪ್ರತಿಯನ್ನು:–**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ.
2. ಅಪರ ಕಾರ್ಮಿಕ ಆಯುಕ್ತರು (ಆಡಳಿತ & ಲೆಕ್ಕಪತ್ರ), ಬೆಂಗಳೂರು
3. ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂಧವ್ಯ), ಬೆಂಗಳೂರು
4. ಜಂಟಿ ಕಾರ್ಮಿಕ ಆಯುಕ್ತರು, ಕನಿಷ್ಠ ವೇತನ ಬೆಂಗಳೂರು
5. ಉಪ ಕಾರ್ಮಿಕ ಆಯುಕ್ತರು, ಪ್ರಚಾರ & ಅಂಕಿ ಅಂಶ, ಬೆಂಗಳೂರು